Issue

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಕಾರ್ಯಾಲಯ, ಬೆಳಗಾವಿ-590-002

**ZILLA PANCHAYAT OFFICE, BELGAUM-590002**


ದೂರವಾಣಿ / Telephone: 0831-2407201, 0831-2407206, 0831-2431640

ಫ್ಯಾಕ್ಸ್/Fax: 0831-2429662

e-mail: ceozpbelgaum@yahoo.com, dsdevbgm@gmail.com


ಕ್ರಸಂ:ಜಿಪ/ಅಭಿವೃದ್ಧಿ/ಗ್ರಾಪಂ/ವಿವ- /2014-15 ಬೆಳಗಾವಿ,ದಿನಾಂಕ: 27-5-2014.

ಕಾರ್ಯನಿರ್ವಾಹಕ ಅಧಿಕಾರಿಗಳು,
ತಾಲೂಕ ಪಂಚಾಯತ ಬೆಳಗಾವಿ, ಖಾನಾಪೂರ,
ಬೈಲಹೊಂಗಲ, ಸವದತ್ತಿ, ರಾಮದುರ್ಗ, ಅಥಣಿ,
ಚಿಕ್ಕೋಡಿ, ಗೋಕಾಕ, ಹುಕ್ಕೇರಿ ಹಾಗೂ ರಾಯಬಾಗ
ಇವರಿಗೆ.

ವಿಷಯ: ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಜನಾಂಗದವರಿಗೆ ಗ್ರಾಮ ಪಂಚಾಯತಿಯ ನಿಧಿಯಿಂದ ಶೇ 25 ರಷ್ಟು ಅನುದಾನವನ್ನು ಮೀಸಲಿಡುವ ಬಗ್ಗೆ ಅನುಸರಿಸಬೇಕಾದ ವಿಧಿ ವಿಧಾನಗಳ ಬಗ್ಗೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಪಂಚಾಯತ ನಿಧಿಯಿಂದ ಮೀಸಲಿಡಲಾಗುತ್ತಿರುವ ಶೇ 25 ರಲ್ಲಿ ಗ್ರಾಮ ಪಂಚಾಯತಿಗಳು ಸರಿಯಾಗಿ ಅನುದಾನವನ್ನು ನಿಗದಿಪಡಿಸುತ್ತಿಲ್ಲವೆಂಬುದು ಕಂಡು ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಪಂಚಾಯತಿಗಳಲ್ಲಿ ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡಕ್ಕೆ ಶೇ 25 ರಷ್ಟರಲ್ಲಿ ನಿಗದಿಪಡಿಸಬೇಕಾದ ಅನುದಾನದ ವಿವರಣೆ ಬಗ್ಗೆ ಉದಾಹರಣೆಯೊಂದಿಗೆ ಮಾಹಿತಿಯನ್ನು ಪತ್ರದೊಂದಿಗೆ ಲಗತ್ತಿಸಲಾಗಿದೆ. ಸದರಿ ಮಾಹಿತಿಯನ್ನು ನಿಮ್ಮ ಅಡಿಯಲ್ಲಿ ಬರುವಂತಹ ಎಲ್ಲಾ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ವಿತರಿಸಿ ಇದರ ಪ್ರಕಾರ ಶೇ 25 ರಷ್ಟು ಅನುದಾನವನ್ನು ನಿಗದಿಪಡಿಸಲು ಸೂಚನೆ ನೀಡಬೇಕೆಂದು ಕೋರಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

ರವಾನಿಸಿದೆ
ದಿ:....27-MAY 2014
ಸಹಿ

lg/25% SC-ST viv-14-15

## ಶೇ 25 ರಷ್ಟು ಅನುದಾನವನ್ನು ಲೆಕ್ಕ ಹಾಕುವಾಗ ಅನುಸರಿಸಬೇಕಾದ ವಿಧಾನದ ಉದಾಹರಣೆ (Calculation Sheet)

ಉದಾಹರಣೆಗಾಗಿ ಬೆಳಗಾವಿ ಜಿಲ್ಲೆಯ (X) ಗ್ರಾಮ ಪಂಚಾಯತಿಯ ಒಟ್ಟು ಆದಾಯ ರೂ.2,00,000/- ಲಕ್ಷ ಇದ್ದಲ್ಲಿ

ಈ ಕೆಳಕಂಡ ಆಡಳಿತ ವೆಚ್ಚವನ್ನು ಒಟ್ಟು ಆದಾಯದಲ್ಲಿ (-) ವ್ಯವಕಲನ ಮಾಡಬೇಕಾಗುತ್ತದೆ.

**ಆಡಳಿತ ವೆಚ್ಚ:**

| | | |
|---|---|---|
| 1. | ಸಿಬ್ಬಂದಿ ವೇತನ ಅಂದಾಜು | ರೂ.24000/- |
| 2. | ಸರ್ಕಾರಕ್ಕೆ ಭರಣಾ ಮಾಡಬೇಕಾದ ಸೆಸ್ | ರೂ.5000/- |
| 3. | ವಿದ್ಯುತ್ತ ಬಿಲ್ಲು | ರೂ.12000/- |
| 4. | ಸದಸ್ಯರ ಭತ್ತೆ | ರೂ.20000/- |
| 5. | ಸ್ಟೇಷನರಿ | ರೂ.15000/- |
| 6. | ದೂರವಾಣಿ ವೆಚ್ಚ | ರೂ.2000/- |
| | **ಒಟ್ಟು ಖರ್ಚು** | **ರೂ.78000/-** |

ಗ್ರಾಮ ಪಂಚಾಯತ ಒಟ್ಟು ಆದಾಯದಲ್ಲಿ ಶೇ 25 ರಷ್ಟು ಮೀಸಲಿರುಸುವಾಗ ಮೇಲ್ಕಂಡ ಖರ್ಚು ರೂ.78000/- ಗಳನ್ನು ಆದಾಯದಲ್ಲಿ (-) ವ್ಯವಕಲನ ಮಾಡಬೇಕು.

ರೂ.2,00,000
- ರೂ.78,000/-
**ರೂ.1,22,000/-**

ಒಟ್ಟು ಆದಾಯದಲ್ಲಿ ಆಡಳಿತ ವೆಚ್ಚ ವ್ಯವಕಲನ ಮಾಡಿ ಉಳಿದ ಮೊತ್ತಕ್ಕೆ ಶೇ 25 ರಷ್ಟು ಮೊತ್ತ ತೆಗೆದು ಅದನ್ನು SC/ST ಪಂಗಡಗಳಿಗೆ ನಿಗದಿಪಡಿಸಬೇಕು.

ಮೇಲ್ಕಂಡ ಉದಾಹರಣೆಯಲ್ಲಿ ಒಟ್ಟು ಆದಾಯ ರೂ.2,00,000/- ರಲ್ಲಿ ಆಡಳಿತ ವೆಚ್ಚ ರೂ.78,000/- ವ್ಯವಕಲನ ಮಾಡಿದಾಗ ಉಳಿಯುವ ಮೊತ್ತ ರೂ.1,22,000/- ಗಳಿಗೆ ಶೇ 25 ರಷ್ಟು 30500/- ಮೊತ್ತವನ್ನು ಪ.ಜಾ/ಪ.ಪಂ ಅನುದಾನ ಎಂದು ಪರಿಗಣಿಸಬೇಕು.

**ಪಂಚಾಯತಿಗಳಲ್ಲಿ ಶೇ 25 ರಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿನಿಯೋಗಿಸುವ ಕುರಿತು ಅನುಸರಿಸಬೇಕಾದ ಕ್ರಮಗಳು**

1. ಶೇ 25 ರನ್ನು ನಿಗದಿಪಡಿಸುವಾಗ ಪಂಚಾಯತ ಸ್ವಂತ ಆದಾಯವನ್ನು ಮಾತ್ರ ಪರಿಗಣಿಸತಕ್ಕದ್ದು.
2. ಗ್ರಾಮ ಪಂಚಾಯತ ನಿಧಿಯಿಂದ ಯಾವುದೇ ವೆಚ್ಚವನ್ನು ಗ್ರಾಮ ಪಂಚಾಯತಿಯು ಬಜೆಟ್ಟನಲ್ಲಿ ಅದಕ್ಕಾಗಿ ಏರ್ಪಾಟನ್ನು ಮಾಡಿಕೊಂಡು ಅಥವಾ ವಿದ್ದುಕ್ತವಾಗಿ ಕಲ್ಯಾಣ ಚಟುವಟಿಕೆಗಳ ಉದ್ದೇಶದ ನಿಧಿಗಳಲ್ಲಿ ಶೇ 25 ಕ್ಕಿಂತ ಕಡಿಮೆ ಇರದಷ್ಟ ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡ ಕಲ್ಯಾಣಕ್ಕಾಗಿ ಈ ಕೆಳಕಂಡ ಉದ್ದೇಶಗಳಿಗಾಗಿ ವಿನಿಯೋಗಿಸಿದ ಆಡಳಿತ ವೆಚ್ಚವನ್ನು ಗಣನೆಗೆ ತೆಗೆದುಕೊಂಡು ಶೇ 25 ರಷ್ಟು ಮೊತ್ತವನ್ನು ನಿಗದಿಪಡಿಸಬೇಕು.

**ಆಡಳಿತ ವೆಚ್ಚ**

ಅ)ವಿದ್ಯುತ್ ಬಿಲ್ಲು.

ಆ)ಸದಸ್ಯರ ಭತ್ತೆ

ಇ)ಸ್ಟೇಷನರಿ

ಈ)ಪಂಚಾಯತಿ ಸಿಬ್ಬಂದಿ ವೇತನ

ಉ)ಸೆಸ್

ಊ)ಗ್ರಾಮ ಪಂಚಾಯತಿಯಿಂದ ಎತ್ತಲಾಗುವ ಯಾವುದೇ ಸಾಲದ ಮೇಲೆ ಬಾಕಿ ಇರುವ ಯಾವುದೇ ಮೊಬಲಗನ್ನು ಸಂದಾಯ ಮಾಡಲು.